ಕೊನೆಯ ಹಂತದಲ್ಲಿ ಮಗುವಿಗೆ ತೀವ್ರ ಜ್ವರ ಹಾಗೂ ಕೆಮ್ಮು ಇದ್ದುದರಿಂದ ಕುಶಾಲನಗರದಲ್ಲಿರುವ ಖಾಸಗಿ ವೈದ್ಯರಿಗೆ ತೋರಿಸಿದ್ದರೆಂದು ತಿಳಿದು ಬಂದಿದೆ, ಈ ಮಗುವು ಪದೇ ಪದೇ ಆಗುವ ಸೋಂಕಿನಿಂದ ನರಳಿ ರೋಗ ನಿರೋಧಕ ಶಕ್ತಿ ಇಲ್ಲದೆ ಮರಣ ಹೊಂದಿರಬಹುದೆಂದು ತಜ್ಞರ ಅಭಿಪ್ರಾಯವಾಗಿರುತ್ತದೆ.

ಮೊದಲ ಮತ್ತು ಎರಡನೇ ಮಕ್ಕಳಲ್ಲಿ ಕಾಣಬರುವ ಲಕ್ಷಣಗಳಾದ ಶಾರೀರಿಕ ಮತ್ತು ಮಾನಸಿಕ ಕುಂಠಿತ ಬೆಳವಣಿಗೆಯನ್ನು ಪರಿಶೀಲಿಸಿದಲ್ಲಿ ಇದು ವಂಶ ಪಾರಂಪರ್ಯದಿಂದ ಬಂದಿರುವ ನ್ಯೂನತೆಯೆಂದು ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ.

3ನೇ ಮಗುವು ಆರೋಗ್ಯವಾಗಿದ್ದು ಹಾಗೂ ಯಾವುದೇ ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆಯು ವಯಸ್ಸಿಗೆ ತಕ್ಕಂತೆ ಕುಂಠಿತವಾಗಿರುವುದಿಲ್ಲ. ಈ ಮಗುವು ಈಗ ಅಂಗನವಾಡಿ ಕೇಂದ್ರಕ್ಕೆ ದಾಖಲಾಗಿದೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ನೀವು ಈಗ ಇಲ್ಲಿ ತನಿಖೆ ಮಾಡಬೇಕಾಗಿರುವುದು ಏನೆಂದರೆ, ಸಾವಿರಾರು ಬಾರಿ ನಾವು ಆಸ್ಪತ್ರೆಗೆ ಹೋದಾರೂ ಕೂಡ ಡಾಕ್ಟರ್‌ಗಳೂ ಉಪೇಕ್ಷೆ ಮಾಡಿದರು ಎಂದು ಆ ದಂಪತಿಗಳು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಮತ್ತು ಕೇವಲ ಮುಲಾಂ ಕೊಟ್ಟು ಮಾತ್ರೆ ಕೊಟ್ಟು ಕಳುಹಿಸುತ್ತಿದ್ದರು. ವಿವರವಾದ ಪರೀಕ್ಷೆ ಮಾಡಲಿಲ್ಲ ಹಾಗಾಗಿ ನಮ್ಮ ಮಗು ಮೃತಪಟ್ಟಿತು ಎಂದು ಅವರು ತಿಳಿಸಿದ್ದಾರೆ. ಈ ಬಗ್ಗೆ ಸೂಕ್ತ ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳಬೇಕು. ಇವತ್ತಿನ ಕಾಲದಲ್ಲಿ ಕೂಡ ಪ್ರಾಥಮಿಕ ಆರೋಗ್ಯಕ್ಕೆ ಕೂಡ ಬಡವರು ವೈದ್ಯಕೀಯ ಚಿಕಿತ್ಸೆ ಇಲ್ಲದೆ ವಂಚಿತರಾಗತ್ತಿರುವುದು ಸರ್ವೇ ಸಾಮಾನ್ಯವಾಗಿರುವ ಹಿನ್ನೆಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

(vii) ವಿಷಯ : ಅಂಗನವಾಡಿ ಕಾರ್ಯಕರ್ತರ ಧರಣಿ ಕುರಿತು.

† **ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ)** : ಮಾನ್ಯ ಅಧ್ಯಕ್ಷರೆ, ರಾಜ್ಯದಾದ್ಯಂತ ಸುಮಾರು 20,000ಕ್ಕಿಂತ ಹೆಚ್ಚು ಜನ ಅಂಗನವಾಡಿ ಕಾರ್ಯಕರ್ತೆಯರು ಇವತ್ತೂ ಕೂಡ ಕೆಲಸವನ್ನು ಸ್ಥಗಿತಗೊಳಿಸಿ ಬೆಂಗಳೂರಿಗೆ ಬಂದಿದ್ದಾರೆ. ಮೊನ್ನೆ ಒಂದು ವಾರದ ಹಿಂದೆ ಕೂಡ ಸುಮಾರು 25,000 ಕ್ಕೂ ಹೆಚ್ಚು ಜನ ಅಂಗನವಾಡಿ ಕಾರ್ಯಕರ್ತೆಯರು ಬೆಂಗಳೂರಿಗೆ ಬಂದಿದ್ದರು. ಇವರು ಹೋರಾಟ ಮಾಡುತ್ತಲೇ ಬಂದಿದ್ದಾರೆ. ಒಂದು ಹೇಳಬೇಕೆಂದರೆ, ನಾವು ಪಂಚಾಯಿತಿ ನೌಕರರಿಗೆ ಕೊಟ್ಟ ಹಾಗೆ, ಪಂಚಾಯಿತಿಯಲ್ಲಿ ಸಂಬಳ, ಮತ್ತು ಪಂಚಾಯಿತಿಯ ಕಂಟ್ರೋಲ್‌ಗೆ ಕೊಟ್ಟಿರುವುದರಿಂದ ಕೆಲವು ಕಿರಿಕಿರಿಗಳನ್ನು ಅನುಭವಿಸುತ್ತಿದ್ದಾರೆ. ಮೊನ್ನೆ ದಿವಸ ರಜೆ ಹಾಕಿದರೆ ಆ ಪಂಚಾಯಿತಿ ಮೆಂಬರ್ ಹೇಳುತ್ತಾರೆ, ಸ್ವಲ್ಪ ನನಗೆ ಕೇಳುವುದಕ್ಕೆ ಹೇಳಿ ನಾನು ಮೊನ್ನೆ ದಿವಸ ಅಂಗನವಾಡಿಗೆ ಹೋದಾಗ ಏನೋ ತೊಂದರೆ ಕೊಟ್ಟಿದ್ದರು ಆ ರಜೆ ಮಂಜೂರು ಮಾಡಬೇಕೋ ಬೇಡವೆಂದು ಹೇಳುತ್ತೇನೆಂದು ಹೇಳಿದ್ದರಂತೆ. ಇಂತಹ ಅನೇಕ ಕಿರಿಕಿರಿಗಳನ್ನು ಅನುಭವಿಸುತ್ತಿದ್ದಾರೆ. ಅದರ

ಬಗ್ಗೆ ಮತ್ತು ಕೆಎಟಿ ತೀರ್ಪು ಕನಿಷ್ಟ ವೇತನ ಕೊಡಬೇಕೆಂದು ಅಂಗನವಾಡಿ ಕಾರ್ಯಕರ್ತೆಯರ ಪರವಾಗಿ ಬಂದಿದೆ. ಅದನ್ನೂ ಕೂಡ ರಾಜ್ಯ ಸರ್ಕಾರ ಅನುಷ್ಠಾನಕ್ಕೆ ತರಲಿಲ್ಲ, ಬೇರೆ ಬೇರೆ ಸಂದರ್ಭಗಳಲ್ಲಿ ತಮ್ಮ ಇಲಾಖೆಯ ನೇಮಕಾತಿಗಳಲ್ಲಿ ತಮ್ಮ ವಿದ್ಯಾರ್ಹತೆಗೆ ಅನುಗುಣವಾಗಿ ಕೊಡಬೇಕೆಂದು ಹೇಳುತ್ತಿದ್ದಾರೆ. ಅನೇಕರು ನಿವೃತ್ತಿ ವಯಸ್ಸಿಗೆ ಬಂದು ಬಿಟ್ಟಿದ್ದಾರೆ. ಅಂತಹವರಿಗೆ ನಿವೃತ್ತಿಯ ನಂತರ ಏನಾದರೂ ಸ್ವಲ್ಪ ಬೆನಿಫಿಟ್ ಕೊಡಬೇಕೆನ್ನುವಂಥ ಬೇಡಿಕೆಯನ್ನು ಇಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರವನ್ನು ವಿನಂತಿ ಮಾಡುತ್ತೇನೆ, ಅಂಗನವಾಡಿ ಕಾರ್ಯಕರ್ತೆಯರಿಗೆ ನಾವು ಅತಿ ಹೆಚ್ಚಿನ ಕೆಲಸವನ್ನು ವಹಿಸಿದ್ದೇವೆ, ಕುರಿ ಲೆಕ್ಕ, ಕೋಳಿ ಲೆಕ್ಕ, ಮನುಷ್ಯರ ಲೆಕ್ಕ ಎಲ್ಲವನ್ನೂ ಕೂಡ ಯಾವುದೇ ಸರ್ಕಾರದ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಿಕ್ಕೆ ಅವರನ್ನೂ ಕೂಡ ಉಪಯೋಗಿಸಿಕೊಳ್ಳುತ್ತೇವೆ. ಹೀಗೆ ಪೂರ್ಣ ಸಮಯದ ಕೆಲಸ ಅತಿ ಕಡಿಮೆ ಸಂಬಳ. ಇದು ಹೆಣ್ಣು ಮಕ್ಕಳ ದುಡಿಮೆ. ದಯವಿಟ್ಟು ಇವರ ಬೇಡಿಕೆಯನ್ನು ಈಡೇರಿಸಬೇಕೆಂದು ಎರಡೆರಡು ಯೂನಿಯನ್‌ಗಳು, ಎರಡೆರಡು ರೀತಿಯಿಂದ ಅಂಗನವಾಡಿ ಕಾರ್ಯಕರ್ತೆಯರನ್ನು ಬೆಂಗಳೂರಿಗೆ ಕರೆದುಕೊಂಡು ಬಂದಿದ್ದಾರೆ. ಸರ್ಕಾರ ಅನೇಕ ಸಾರಿ ಆಶ್ವಾಸನೆಗಳನ್ನು ಕೊಟ್ಟಿತ್ತು. ಅವರನ್ನು ಕರೆದು ಮಾತನಾಡಿ ಇದನ್ನು ಸಹಾನುಭೂತಿಯಿಂದ ಸರ್ಕಾರ ಪರಿಶೀಲನೆ ಮಾಡಿ, ಇವರಿಗೆ ಸಾಂತ್ವನವನ್ನು ಹೇಳಬೇಕು. ಈ ಬೇಡಿಕೆಗಳನ್ನು ಮನ್ನಿಸಿ, ಕೆಎಟಿ ತೀರ್ಪಿನಂತೆ, ಕನಿಷ್ಟ ವೇತನವನ್ನು ಕೊಡಲಿಕ್ಕೇನೂ ತೊಂದರೆಯಾಗುವುದಿಲ್ಲ. ಅವರ ಸಂಬಳ ಬಹಳ ಕಡಿಮೆ ಇದೆ. ಕೆಎಟಿ ತೀರ್ಪು ಕೂಡ ಅವರ ಪರ ಇದೆ. ನೀವು ಸುಪ್ರೀಂ ಕೋರ್ಟಿಗೆ ಹೋಗಿದ್ದೀರಿ. ಸುಪ್ರೀಂ ಕೋರ್ಟಿನಲ್ಲಿ ಏನಾದರೂ ತೀರ್ಮಾನವಾಗಲಿ, ಕೆಎಟಿ ತೀರ್ಪಿನ ಪ್ರಕಾರ ಇವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ವಿಶೇಷವಾಗಿ ಅವರು ಇಷ್ಟು ವರ್ಷ ಕೆಲಸ ಮಾಡಿದ ನಂತರ, ನಿವೃತ್ತಿ ಆದ ನಂತರ ನೀವು ಕೈ ಎತ್ತಿಕೊಂಡು ಹೋಗಿ ಎಂದು ಹೇಳುವಂಥದ್ದು ಒಳ್ಳೆಯದಾಗುವುದಿಲ್ಲ. ಲಕ್ಷಗಟ್ಟಲೆ ಹೆಚ್ಚಿಗೆ ಹಣ ಕೊಡಿ ಎಂದು ಅವರೇನೂ ಕೇಳುವುದಿಲ್ಲ, ಒಂದು ಫಂಡ್ ಎಂದು ಮಾಡಿ ಎಂದು ಹೇಳಿದ್ದಾರೆ. ದಯಮಾಡಿ ಸರ್ಕಾರ ಇದನ್ನು ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ಬಂದಿರತಕ್ಕಂತಹ ಆ ಅಂಗನವಾಡಿ ಕಾರ್ಯಕರ್ತೆಯರನ್ನು ಸರ್ಕಾರ ಹೋಗಿ ಮಾತನಾಡಿಸಬೇಕು. ಅವರಿಗೆ ಧೈರ್ಯವನ್ನು ತುಂಬಬೇಕು ಎನ್ನುವಂತಹ ವಿನಂತಿಯನ್ನು ಈ ಸನದ ಮೂಲಕ ಮಾಡಿಕೊಳ್ಳುತ್ತೇನೆ.

ಡಾ॥ ಕೆ. ಅನ್ನದಾನಿ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡಿದ ಹಾಗೆ, ಅಂಗನವಾಡಿ ಕಾರ್ಯಕರ್ತರ ಚಳುವಳಿ ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಚಳುವಳಿ ಮಾಡುತ್ತಿದ್ದಾರೆ. ಅದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳದೇ ಹೋದ ಸಂದರ್ಭದಲ್ಲಿ ತೊಂದರೆಯಾಗುತ್ತದೆ.

ಪ್ರತಿಯೊಂದು ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲವೆಂದು ಜನತೆ ಗಲಾಟೆ ಮಾಡುತ್ತಿದ್ದಾರೆ. ಪದೇ ಪದೇ ಅವರು ಬೆಂಗಳೂರಿಗೆ ಬರತಕ್ಕಂಥದ್ದು, ಚಳುವಳಿಯಲ್ಲಿ ಭಾಗವಹಿಸುವಂಥದ್ದು, ಇದನ್ನೆಲ್ಲಾ ಮಾಡುವುದರಿಂದ ಗ್ರಾಮೀಣ ಪ್ರದೇಶದ ಸಮಸ್ಯೆಗಳು ಉಲ್ಬಣಗೊಳ್ಳುತ್ತದೆ, ಅದಕ್ಕೋಸ್ಕರ ಸರ್ಕಾರ ದಯಮಾಡಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳದೆ ಹೋದರೆ ಶಾಸಕರಿಗೂ ತೊಂದರೆಯಾಗುವ ಸಂದರ್ಭಗಳು ಇವೆ, ಆದಷ್ಟು ಬೇಗ ಈ ಸಮಸ್ಯೆ ಬಗೆಹರಿಸಬೇಕು. ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಮತ್ತು ಅಂಗನವಾಡಿ ಕಾರ್ಯಕರ್ತರೆಲ್ಲಾ ಬೆಂಗಳೂರಿಗೆ ಬಂದಿರುವುದರಿಂದ ನಮಗೆ ಕುಡಿಯುವುದಕ್ಕೆ ನೀರಿಲ್ಲದ ಹಾಗಾಗಿದೆ ಎಂದು ನಮಗೆ ಹೇಳುತ್ತಿದ್ದಾರೆ. ಇದನ್ನು ಯಾವಾಗ ಪರಿಹಾರ ಮಾಡುತ್ತೀರಿ? ಎಲ್ಲಾ ಶಾಸಕರಿಗೂ ಒತ್ತಾಯ ಮಾಡುತ್ತಿರುವುದರಿಂದ ಸರ್ಕಾರ ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸುವುದು ಸಮಂಜಸವೆಂದು ಈ ಸಂದರ್ಭದಲ್ಲಿ ಸರ್ಕಾರದ ಗಮನ ಸೆಳೆಯುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಜ್ಞಾನೇಂದ್ರರವರು ಎತ್ತಿದ ಪ್ರಶ್ನೆಗೆ ಸರ್ಕಾರ ಉತ್ತರ ಕೊಡುವ ಪೂರ್ವದಲ್ಲಿ ಅವರು ಎತ್ತಿದ್ದಾರೆ. ಶೂನ್ಯ ವೇಳೆಯನ್ನು ತಾವು ಅದನ್ನು ಪ್ರಸ್ತಾಪ ಮಾಡಿದ್ದೀರಿ, ಅಂಗನವಾಡಿ ಕಾರ್ಯಕರ್ತೆಯರ ವಿಚಾರ ಸುಪ್ರೀಂ ಕೋರ್ಟಿನಲ್ಲಿರುವುದು ತಮಗೆ ಗೊತ್ತಿದೆ. ಅದು ಒಂದು ಯೋಜನೆಯಿಂದ ಬಂದಿರತಕ್ಕಂಥದ್ದು. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ, ಯಾರಾದರೂ ಒಬ್ಬ ಸಚಿವರು ಸರ್ಕಾರದ ಪರವಾಗಿ ಅಲ್ಲಿ ಬಂದಿರತಕ್ಕಂತಹ ಕಾರ್ಯಕರ್ತೆಯರನ್ನು ಕಂಡು ಅವರ ಬೇಡಿಕೆಗಳ ಕುರಿತಾಗಿ ಸರ್ಕಾರ ಪ್ರತಿಕ್ರಿಯೆ ಮಾಡುತ್ತದೆ, ಅವರ ಬಗ್ಗೆ ಅನುಕಂಪ ತೋರಿಸುತ್ತದೆ, ನಿಯಮಾವಳಿಗಳು ಮತ್ತು ಸಂಪನ್ಮೂಲಗಳ ಸಾಧ್ಯತೆ ಇತಿಮಿತಿಗಳಲ್ಲಿ ಅದಕ್ಕೆ ಸರಿಯಾದ ಪರಿಹಾರವನ್ನು ಕಂಡುಕೊಳ್ಳುತ್ತೇವೆ. ಕುಡಿಯುವ ನೀರಿನ ವಿಚಾರದಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಗಮನ ಕೊಡುತ್ತೇನೆ. ಆರ್‌ಡಿಪಿಆರ್ ಕಾರ್ಯದರ್ಶಿಗಳ ಜೊತೆ ಚರ್ಚಿಸಿ ನಿರ್ಧಾರ ಮಾಡುತ್ತೇವೆ.

(viii) ವಿಷಯ : ಮಂಗಳೂರು ಹೊರವಲಯದ ಸೇತುವೆ ದುರಸ್ತಿ ಕುರಿತು.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೆ, ಮಂಗಳೂರಿನಿಂದ ಈ ಕಡೆ ಬರಬೇಕಾದರೆ, ಮಂಗಳೂರು ಹೊರ ವಲಯದ ಸೇತುವೆ ಬಹಳ ನಿಷ್ಕ್ರಿಯವಾಗಿ ಬಿಟ್ಟಿದೆ, ಅಲ್ಲಿ ಲಾರಿಗಳು ಓಡಾಡಬಾರದು ಎಂದು ಜನ ಅನೇಕ ಸಾರಿ ಪ್ರತಿಭಟನೆ ಮಾಡಿದರೂ ಸಹ ಸರ್ಕಾರ ಗಮನ ಕೊಡದ ಪರಿಣಾಮವಾಗಿ, ಮಂಗಳೂರಿನಿಂದ ಈ ಕಡೆ ಇವತ್ತು ಜನ ಸಂಚಾರ ಅಸ್ತವ್ಯಸ್ತವಾಗಿದೆ. ಸನ್ಮಾನ್ಯ ಶಾಸಕರಾದ ಜಯಪ್ರಕಾಶ್ ಹೆಗಡೆಯವರು ಶಾಸನ ಸಭೆಗೆ ಬರುವುದಕ್ಕೆ ಸಾಧ್ಯವಾಗಲಿಲ್ಲ. ಅವರು ದೂರವಾಣಿ ಮುಖಾಂತರ ನನಗೆ ತಿಳಿಸಿ ಈ ತರಹ ನಾನು ಇಲ್ಲಿ ಸಿಕ್ಕಿ ಹಾಕಿಕೊಂಡಿದ್ದೇನೆ, ಹೇಗಾದರೂ ಮಾಡಿ ಸರ್ಕಾರದ ಗಮನ